ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	68
ಸದಸ್ಯರ ಹೆಸರು	:	ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	09.07.2018.
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಕಾರಂಜಾ ಜಲಾಶಯಕ್ಕೆ ಹರಿದು ಬರುವ ನೀರಿನ ಪ್ರಮಾಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು. ವರ್ಷ / ಒಳಹರಿವು (TMC): 2013 – 4.63 2014 – 0.242 2015 – 0.143 2016 – 8.16 2017 – 4.36
ಆ)	ಕಾರಂಜಾ ಯೋಜನೆಯ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ ತೆಲಂಗಾಣದ ಕೊತ್ತೂರು ಬಳಿಯ ಬ್ಯಾರೇಜ್‌ನಲ್ಲಿ ನೀರು ನಿಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
ಇ)	ಕೊತ್ತೂರು ಬ್ಯಾರೇಜ್‌ನಲ್ಲಿ ನೀರನ್ನು ನಿಲ್ಲಿಸುವುದರಿಂದ ಕಾರಂಜಾ ಜಲಾಶಯದ ಒಳಹರಿವು ಕಡಿಮೆಯಾಗಿ ನೀರಾವರಿ ಉದ್ದೇಶಕ್ಕೆ ಅಡ್ಡಿಯಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಆಂಧ್ರ ಪ್ರದೇಶ ರಾಜ್ಯ ಸರ್ಕಾರದಿಂದ 1975ರ ಒಪ್ಪಂದ ಉಲ್ಲಂಘನೆಯಾಗುತ್ತಿದೆ ಎಂದು ಆಂಧ್ರ ಪ್ರದೇಶದೊಂದಿಗೆ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಆದರೆ, ಯೋಜನೆಗೆ ನೀರಿನ ಕೊರತೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ಮಾಂಜ್ರಾ ನದಿಯಿಂದ ನೀರನ್ನೆತ್ತಿ ಕಾರಂಜಾ ಯೋಜನೆಯ ಕಾಲುವೆಗಳಿಗೆ ನೀರನ್ನು ಒದಗಿಸಲು ಈಗಾಗಲೇ ಎರಡು ಯೋಜನೆಗಳನ್ನು ರೂಪಿಸಲಾಗಿದೆ.

ಸಂಖ್ಯೆ: ಜಸಂಇ 26 ಎಂಎಲ್ಎ 2018

[ಡಿ.ಕೆ.ಶಿವಕುಮಾರ್]
ಜಲಸಂಪನ್ಮೂಲ ಸಚಿವರು.